916

ಪತ್ರಗಳ ಮೂಲಕ 1,500 ರೂಪಾಯಿಗಳಿಗೆ ಜಾಮೀನು ಕೊಡಲಿಕ್ಕಾಗಲಿ ತಪ್ಪಿದರೆ ಸದರೀ ಕೈವಣೀ ಮೊಬಲಗು ಸರಕಾರಕ್ಕೆ ಸೇರಿಸಿ ಕೊಳ್ಳಲ್ಪಡುವದು.

11. ಕಂಟ್ರಾಕ್ಟುದಾರನಿಗೆ ನಗದು ಅಡ್ವಾನ್ಸ್ ಯಾವದೂ ಕೊಡಲ್ಪಡಲಾರದು: ಸರಬರಾಯಿ ಮಾಡಲ್ಪಟ್ಟ ಪದಾರ್ಥಗಳಿಗಾಗಿ ಮೊಬಲಗುಗಳು ಪ್ರತಿ ತಿಂಗಳ 1ನೇ ತಾರೀಖಿಗೆ ತರುವಾಯ ಕೂಡಿದಷ್ಟು ತ್ವರೆಯಾಗಿ ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರಿಂದ ಸಲ್ಲಿಸಲ್ಪಡುವದು.

12. ಕಂಟ್ರಾಕ್ಟುದಾರನಿಗೆ ಉಗ್ರಾಣದ ಬಗ್ಗೆ ಬಂದು ಖೋಲಿಯು ಕೊಡಲ್ಪಡುವದು. ಅದರಲ್ಲಿ ನಷ್ಟವಾಗದೇ ಯಿರುವ ದರೋಬಸ್ತು ಪದಾರ್ಥಗಳನ್ನೂ ಅವನು ಯಿಟ್ಟುಕೊಳ್ಳಬಹುದು, ಮಾಂಸ ವಗೈರೆ ನಷ್ಟವಾಗತಕ್ಕ ಪದಾರ್ಥಗಳು ಪ್ರತಿ ದಿವಸ ಬೆಳಿಗ್ಗೆ 8 ಘಂಟೆಯೊಳಗೆ ಜೈಲಿಗೆ ಬಂದಿರತಕ್ಕದ್ದು.

13. ಕಂಟ್ರಾಕ್ಟು ವಳಗೇನಿಗೆ ಕೊಡಲ್ಪಡಕೂಡದು.

14. ಕಂಟ್ರಾಕ್ಟಿನ ನಿಬಂಧನೆಗಳ ಬಾಬತು ಯಾವ ಅತಿಕ್ರಮಕ್ಕಾಗಲಿ, ಯಾವದಾದರೂ ಹಲ್ಕೀ ಪದಾರ್ಥಗಳ ಸರಬರಾಯಿ ಬಗ್ಗ್ಯಾಗಲಿ, ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರ ಯಖ್ತ್ಯಾರೀ ಮೇಲೆ 150 ರೂಪಾಯಿಗಳಿಗೆ ಮಿರದ ಬಂದು ಜುರ್ಮಾನೆ ವಸೂಲ್ ಮಾಡಲ್ಪಡುವದು, ಬಾರ್‌ಬಾರ್ ಅತಿಕ್ರಮ ನಡಸಿದ ಪಕ್ಷಕ್ಕೆ ಕಂಟ್ರಾಕ್ಟು ರದ್ದು ಮಾಡಲ್ಪಟ್ಟು ಜಾಮೀನು ಮೊಬಲಗು ಸರಕಾರಕ್ಕೆ ತೆಗದುಕೊಳ್ಳಲ್ಪಡುವದು.

15. ಕಂಟ್ರಾಕ್ಟಿನ ಅತಿಕ್ರಮಕ್ಕೆ ಸಂಬಂಧಿಸಿದ ದರೋಬಸ್ತು ಸಂಗತಿಗಳಲ್ಲಿಯೂ ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರ ತೀರ್ಮಾನವು ಅಖೈರಾಗಿರತಕ್ಕದ್ದು.

16. ಕಂಟ್ರಾಕ್ಟುದಾರನು ಕಂಟ್ರಾಕ್ಟಿನ ದರದ ಪ್ರಕಾರವೇ ಖೈದೀಗಳ ಉಪಯೋಗಕ್ಕೋಸ್ಕರ ಜೈಲ್ ತೋಟದಿಂದ ಕಾಯಿಪಲ್ಯಗಳನ್ನು ಕೊಂಡು ಕೊಳ್ಳಬೇಕು.

17. ಹೆಚ್ಚಿಗೇ ಸಂಗತಿ ಯಾವದಾದರೂ ತಿಳಕೊಳ್ಳಬೇಕಾದರೆ ಸೂಪರಿಂಟೆಂಡೆಂಟರ ಆಫೀಸಿನಲ್ಲಿ ಕೇಳಿ ತಿಳದುಕೊಳ್ಳತಕ್ಕದ್ದು.

18. ಈ ಕಂಟ್ರಾಕ್ಟು ಮೈಸೂರು ಶೀಮೆಯಲ್ಲಿನ ಜೈಲ್‌ಗಳ ಇನ್‌ಸ್ಪೆಕ್ಟರ್ ಜನರಲ್ಲವರ ಮಂಜೂರಾತಿಗೆ ವಳಪಟ್ಟಿರತಕ್ಕದ್ದು.

ಜೆ. ಹೆಡರ್ಸ್,
ಸೂಪರಿಂಟೆಂಡೆಂಟ್.

ಮೈಸೂರು ಡಿಸ್ಟ್ರಿಕ್ಟು.

ತಾರೀಖು 30ನೇ ಅಕ್ಟೋಬರ್ 1884.

ಇದರಿಂದ ತಿಳಿಯಪಡಿಸುವದೇನಂದರೆ, ಯಡತೊರೆ ತಾಲ್ಲೂಕು ಸಬ್ ರಿಜಿಸ್ಟ್ರಾ ಆಫೀಸಿನಲ್ಲಿ ಜೇವಾರಸಾಗಿ ಯಿರತಕ್ಕ ಕೆಳಗೆ ವಿವರಿಸೋಣಾದ ದಸ್ತಾವೇಜನ್ನು ಹಾಜರ್ ಮಾಡಿದವರೇ ಆಗಲಿ ಅಥವಾ ವಾಪಸ್ ಪಡಿಯಲಿಕ್ಕೆ ಅವರಿಂದ ಕ್ರಮವಾದ ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರರೇ ಆಗಲಿ ಈ ನೋಟೀಸ್ ತಾರೀಖು ಲಾಗಾಯತು ಬಂದು ತಿಂಗಳಲ್ಲಿ ಸಬ್ ರಿಜಿಸ್ಟ್ರಾರ್ ರೂಬರೂ ಹಾಜರಾಗಿ ಅದನ್ನು ವಾಪಸ್ ತೆಗದುಕೊಳ್ಳಬಹುದು. ತಪ್ಪಿದರೆ 1877ನೇ ಇಸವಿ ಮೂರನೇ ನಂಬರ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಅನುಸರಿಸಿ ಅದನ್ನ ನಾಶಪಡಿಸಲ್ಪಡುತ್ತೆ.

ನಂಬರ್ 9.

ದಸ್ತಾವೇಜು ನಂಬರು.	ದಸ್ತಾವೇಜು ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟ್ರಿದ ತಾರೀಖು.	ದಸ್ತಾವೇಜು ಬರದು ಕೊಟ್ಟವನ ಹೆಸರು.	ದಸ್ತಾವೇಜು ಬರಸಿ ಕೊಂಡವನ ಹೆಸರು.	ದಸ್ತಾವೇಜಿನ ಸ್ವಭಾವ.
32 / 1882—83	7—4—82	7—4—82	ಯೆಡತೊರೆ ತಾಲ್ಲೂಕು ಲೆಕ್ಕಿಕುಪ್ಪೆ ಗ್ರಾಮದಲ್ಲಿ ಇರುವ ದೇಪುಗೌಡನ ದ್ಯಾವೇಗೌಡನ ಹೆಂಡತಿ ಜಮೀನಿಂದ ಜೀವಿಸುವ ವಕ್ಕಲಿಗರ ಜಾತಿ ದೊಡ್ಡಿ	ಯಡತೊರೆ ತಾಲ್ಲೂಕು ಲೆಕ್ಕಿಕುಪ್ಪೆ ಗ್ರಾಮದಲ್ಲಿ ಇರುವ ವಕ್ಕಲಿಗರ ಜಾತಿ ಚಿರಾಯಿತು ಕಸಬಿನ ಮರಿಗೌಡ	100 ರೂಪಾಯಿನ ಭೂಸ್ಥಿತಿ ಕ್ರಯಪತ್ರ.